**O.S. No.466/2022. PW-1.**

ದಿನಾಂಕ:**04.12.2024** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿಯರ ಪರ ಶ್ರೀಮತಿ ಬಿ ಆರ್ ಆರ್ ವಕೀಲರಿಂದಃ-

ನನ್ನ ತಂದೆ ಶಿವಮೂರ್ತಯ್ಯ ರವರಿಗೆ ಒಟ್ಟು 5 ಜನ ಮಕ್ಕಳು, ಅವರುಗಳೆಂದರೆ ಮಂಗಳ, ಪುಷ್ಪಾವತಿ, ಗೀತಾ, ಲತಾ, ಅನ್ನಪೂರ್ಣ. ವಾದಿ ನನ್ನ ತಾಯಿ. ನಾನು ಈ ದಾವೆಯಲ್ಲಿ ಪಕ್ಷಗಾರಳಾಗಿಲ್ಲ ಎಂದರೆ ಸರಿ. ದಾವೆಯನ್ನು ಸರ್ವೆ ನಂ.23, 24, 9/ಪಿ2 ಗೆ ಸಂಬಂಧಪಟ್ಟಂತೆ ಹಾಕಿರುತ್ತೇವೆ. ಈ ಮೂರು ಆಸ್ತಿಗಳು ಸುಮಾರು 25 ವರ್ಷಗಳ ಹಿಂದೆ ನನ್ನ ತಂದೆಗೆ ವಿಭಾಗದ ಮೂಲಕ ಬಂದಿವೆ. ಸದರಿ ವಿಭಾಗದಲ್ಲಿ ದಾವಾ ಸ್ವತ್ತು ಹೊರತು ಪಡಿಸಿ ಬೇರೆ ಆಸ್ತಿಗಳು ನನ್ನ ತಂದೆಗೆ ಬಂದಿವೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಸರ್ವೆ ನಂ.6/4 ಪಿ, 3/3 ನನ್ನ ತಂದೆಗೆ ವಿಭಾಗದ ಮೂಲಕವೇ ಬಂದ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ.

ನನ್ನ ತಂದೆಗೆ ಇಬ್ಬರು ಸಹೋದರಿ ಮತ್ತು ಒಬ್ಬ ಸಹೋದರ. ಸಹೋದರಿಯರಲ್ಲಿ ಒಬ್ಬರ ಹೆಸರು ಪಾರ್ವತಮ್ಮ ಮತ್ತೊಬ್ಬರ ಹೆಸರು ನನಗೆ ಗೊತ್ತಿಲ್ಲ. ಪ್ರಭುಕುಮಾರಸ್ವಾಮಿ ನನ್ನ ತಂದೆಯ ತಮ್ಮ. ನನ್ನ ತಂದೆಯ ಸಹೋದರಿ ಪಾರ್ವತಮ್ಮ ರವರು ದಾವಾ ಸ್ವತ್ತುಗಳು ಮತ್ತು ಸರ್ವೆ ನಂ.6/4 ಪಿ, 3/3 ರ ಸ್ವತ್ತುಗಳನ್ನು ಸೇರಿಸಿ 3 ನೇ ಹೆ.ಸಿವಿಲ್ ನ್ಯಾಯಾಲಯದಲ್ಲಿ ವಿಭಾಗ ಕೋರಿ ನನ್ನ ತಂದೆ ಮತ್ತು ನಮ್ಮಗಳ ವಿರುದ್ಧ ದಾವೆ ಸಲ್ಲಿಸಿದ್ದಾರೆ ಎಂದರೆ ಅದು ಸುಳ್ಳು ದಾವೆಯಾಗಿರುತ್ತದೆ. ದಾವಾ ಅನುಸೂಚಿ 1 ರ ಸ್ವತ್ತು ಒಟ್ಟು 30 ಗುಂಟೆ ಇದೆ. ನನ್ನ ತಂದೆಯ ಹಿಸ್ಸೆಗೆ ವಿಭಾಗದಲ್ಲಿ ಎಷ್ಟು ಆಸ್ತಿಗಳು ಬಂದಿವೆ ಎಂದು ನನಗೆ ಗೊತ್ತಿಲ್ಲ. ಕೆಲವೊಂದು ಆಸ್ತಿಯನ್ನು ನನ್ನ ತಂದೆ ಮಾರಾಟ ಮಾಡಿರುತ್ತಾರೆ. ಸರ್ವೆ ನಂ.23 ರಲ್ಲಿ ನನ್ನ ತಂದೆಗೆ ಒಟ್ಟು 5 ಎಕರೆ 20 ಗುಂಟೆ ಜಮೀನು ಬಂದಿದೆ ಎಂದರೆ ಸರಿಯಲ್ಲ. ಸರ್ವೆ ನಂ.23 ರ ಒಟ್ಟು 5 ಎಕರೆ 20 ಗುಂಟೆ ಜಮೀನಿನ ಪೈಕಿ 23 ಗುಂಟೆ ಜಮೀನನ್ನು ಜಯಮ್ಮ ರವರಿಗೆ ನನ್ನ ತಂದೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.23 ರಲ್ಲಿ ನನ್ನ ಅತ್ತೆ ಪಾರ್ವತಮ್ಮ ರವರು ಮನೆ ಕಟ್ಟಿಕೊಂಡು ನಿವೇಶನ ಮಾಡಿಕೊಂಡು ವಾಸಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಬೇರೆ ಯಾರೋ ಮನೆ ಕಟ್ಟಿರುತ್ತಾರೆ ಆದರೆ ಅದು ಪಾರ್ವತಮ್ಮ ರವರು ಕಟ್ಟಿರುತ್ತಾರೆ ಎಂದು ಈಗ ಹೇಳುತ್ತಿದ್ದಾರೆ ಎಂದು ನುಡಿಯುತ್ತಾರೆ. ಸರ್ವೆ ನಂ.23 ರಲ್ಲಿ ಅಂದರೆ ದಾವಾ ಎ ಅನುಸೂಚಿ ಸ್ವತ್ತಿನಲ್ಲಿ ಮನೆ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಸರ್ವೆ ನಂ.23 ರ ಜಮೀನಿನ ಅಳತೆ ಮಾಡಿಕೊಡುವಂತೆ ಸರ್ವೆಯರ್ ರವರಿಗೆ ಅರ್ಜಿ ನೀಡಿರುತ್ತೇನೆ, ಆದರೆ ಅವರು ಸರ್ವೆಗೆಂದು ಬಂದಿರುವುದಿಲ್ಲ. ಯಾವ ವರ್ಷ ಅರ್ಜಿ ನೀಡಿದ್ದೇವೆ ಎಂದು ನನಗೆ ನೆನಪಿಲ್ಲ. ದಾವಾ ಅನುಸೂಚಿ 2 ನೇ ಸ್ವತ್ತಿನ ಪೂರ್ವಕ್ಕೆ ಗುರುಮೂರ್ತಯ್ಯ ರವರ ಜಮೀನು, ಪಶ್ಚಿಮಕ್ಕೆ ಸಿದ್ದರಾಮಯ್ಯ ರವರ ಜಮೀನು, ಉತ್ತರಕ್ಕೆ ಶಿವಮೂರ್ತಯ್ಯ ರವರ ಜಮೀನು, ದಕ್ಷಿಣಕ್ಕೆ ಕುವೆಂಪು ಯುನಿವರ್ಸಿಟಿ ಜಾಗ ಇದೆ. ಕುವೆಂಪು ಯುನಿವರ್ಸಿಟಿ ರವರು ಅವರ ಜಾಗ ಗುರುತಿಸಿ ಅವರ ಜಾಗಕ್ಕೆ ತಂತಿ ಬೇಲಿ ಹಾಕಿಕೊಂಡಿದ್ದಾರೆ ಎಂದರೆ ಸರಿ.

ನನ್ನ ತಾಯಿಯವರು ನನ್ನ ತಂದೆ ಮೃತಪಟ್ಟಗಿನಿಂದ ಗೆದ್ದಲೇಹಳ್ಳಿ ಗ್ರಾಮದಲ್ಲಿ ವಾಸವಿಲ್ಲ ಎಂದರೆ ಅಲ್ಲಿ ವಾಸಮಾಡಲು ಬಿಡುತ್ತಿಲ್ಲ ಆ ಕಾರಣ ಅವರು ಅಲ್ಲಿ

ವಾಸವಿಲ್ಲ. ನನ್ನ ತಂದೆ ಮದುವೆಯಾದ ನಂತರದಿಂದ ನನ್ನ ತಂದೆ-ತಾಯಿ ಸಖರಾಯಪಟ್ಟಣದ ಅಗ್ರಹಾರ ಗ್ರಾಮದಲ್ಲಿ ವಾಸವಿದ್ದರು ಎಂದರೆ ಸರಿ. ದಾವಾ ಆಸ್ತಿಯು ಕಸಬಾ ಹೋಬಳಿ, ಗೆದ್ಲೆಹಳ್ಳಿ ಗ್ರಾಮದಲ್ಲಿ ಇದೆ ಎಂದರೆ ಸರಿ. ದಾವಾ ಆಸ್ತಿಗೂ ಮತ್ತು ಅಗ್ರಹಾರ ಗ್ರಾಮಕ್ಕು ಎಷ್ಟು ಅಂತರವಿದೆ ಎಂದು ನನಗೆ ಗೊತ್ತಿಲ್ಲ, ತುಂಬಾ ದೂರ ಇದೆ. ದಾವಾ ಆಸ್ತಿಯಲ್ಲಿ ಯಾವ ಆಸ್ತಿ ಇಂಡಸ್ಟ್ರೀಯಲ್ ಡೆವಲ್ಪಮೆಂಟ್ ಗೆ ಜಪ್ತಿಯಾಗಿದೆ ಎಂದು ನನಗೆ ಗೊತ್ತಿಲ್ಲ. ಇಂಡಸ್ಟ್ರೀಯಲ್ ಡೆವಲ್ಪಮೆಂಟ್ ರವರು ನೀಡಿದ ಪರಿಹಾರದ ಮೊತ್ತವನ್ನು ಯಾರಿಗೆ ನೀಡಲಾಗಿರುತ್ತದೆ ಎಂದರೆ ಸಾಕ್ಷಿಯು ರಸ್ತೆ ಅಭಿವೃದ್ಧಿ ಇಲಾಖೆಯಿಂದ ಬಂದ ಪರಿಹಾರದ ಮೊತ್ತವು ನನ್ನ ತಂದೆಯ ಹೆಸರಿಗೆ ಬಂದಿರುತ್ತದೆ.

ಸರ್ವೆ ನಂ.23 ರಲ್ಲಿ ನನ್ನ ತಂದೆಯವರು ಚನ್ನಬಸವಯ್ಯ ರವರಿಗೆ 5 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಜಯಮ್ಮ ಬಿನ್ ಅಜ್ಜಪ್ಪ ರವರಿಗೆ ಹಾಗೂ ಸಿದ್ದರಾಮಮ್ಮ ಬಿನ್ ಏಕಾಂತಯ್ಯ ರವರಿಗೆ ನನ್ನ ತಂದೆ ತಲಾ 1 ಎಕರೆಯನ್ನು ಸರ್ವೆ ನಂ.23 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಕಾರಣ ನನಗೆ ಅಥವಾ ನನ್ನ ತಂದೆಗೆ ದಾವಾ ಅನುಸೂಚಿ 1 ರಲ್ಲಿ ಹೇಳಿರುವಂತೆ 30 ಗುಂಟೆ ಜಮೀನು ಉಳಿದಿಲ್ಲ ಎಂದರೆ ಸರಿಯಲ್ಲ. ಬೀರೂರಿನ ವಿಮಲ್ ಜ್ಯೂವೆಲ್ಲರಿಸ್ ರವರ ಪರಿಚಯ ನನಗೆ ಇಲ್ಲ. ಸರ್ವೆ ನಂ.3/3 ರಲ್ಲಿ 8 ½ ಗುಂಟೆ ಜಮೀನನ್ನು ನನ್ನ ತಾಯಿ ಮತ್ತು ನಾವುಗಳು ಸೇರಿ ವಿಮಲ್ ಜ್ಯೂವೆಲ್ಲರಿಸ್ ರವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿಯವರಿಗೆ ಮಾರಾಟ ಮಾಡುವಾಗ ಸದರಿ ಸ್ವತ್ತು ನಮ್ಮ ಒಟ್ಟು ಕುಟುಂಬಕ್ಕೆ ಸೇರಿದ ಸ್ವತ್ತು ಮಾರಾಟ ಮಾಡಬೇಡಿ ಎಂದು ಹೇಳಿದ ಕಾರಣಕ್ಕಾಗಿ ಈ ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಅನುಮತಿ ನೀಡಿ ಮುಂದೂಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು